# ಹಿತಕರವಾದ ಆಲೆದಾಟ..

**ಯುವ ನಟರಿಗೊಂದು ಇಮೇಜ್ ಕಟ್ಟಿಕೊಡುವಲ್ಲಿ ಪೂರಿ ಜಗನ್ನಾಥ್ ಪ್ರಸಿದ್ಧರು. ಅವರ ನಿರ್ದೇಶನದ 'ರೋಗ್' ಚಿತ್ರದ ಮೂಲಕ ಇಶಾನ್ ಗಾಂಧಿನಗರಕ್ಕೆ ಪರಿಚಯಗೊಳ್ಳುತ್ತಿದ್ದಾರೆ.**





'ರೋಗ್' – ಪೂರಿ ಜಗನ್ನಾಥ್ ನಿರ್ದೇಶನದ ಕನ್ನಡ ಸಿನಿಮಾದ ಹೆಸರು. ಅದ್ದೂರಿ ಕಾರ್ಯಕ್ರಮದಲ್ಲಿ ಹಾಡುಗಳ ಧ್ವನಿಮುದ್ರಿಕೆ ಇತ್ತೀಚೆಗಷ್ಟೇ ಬಿಡುಗಡೆಯಾಗಿದೆ. ಆ ಮೂಲಕ 'ರೋಗ್' ಬಿಡುಗಡೆಗೆ ದಿನಗಣನೆ ಆರಂಭವಾಗಿದೆ.

'ರೋಗ್' ಹಲವು ಕಾರಣಗಳಿಂದ ಗಮನಸೆಳೆದಿರುವ ಸಿನಿಮಾ. ಚಿತ್ರದ ಮೊದಲ ಆಕರ್ಷಣೆ ಪೂರಿ ಜಗನ್ನಾಥ್. ಬಾಲನಟನಿಂದ ನಾಯಕ ನಟನ ಸ್ಥಾನಕ್ಕೆ ಪುನೀತ್ ರಾಜಕುಮಾರ್ ಬಡ್ತಿ ಪಡೆದ 'ಅಪ್ಪು' ಚಿತ್ರವನ್ನು ನಿರ್ದೇಶಿಸಿದ ಖ್ಯಾತಿ ಅವರದು. ನಂತರ ಶಿವರಾಜ್‌ಕುಮಾರ್ ನಟನೆಯ 'ಯುವರಾಜ' ಚಿತ್ರವನ್ನು ನಿರ್ದೇಶಿಸಿದ್ದರು. ಅದಾದಮೇಲೆ, ತೆಲುಗು ಚಿತ್ರರಂಗದಲ್ಲಿ ಬಿಜಿಯಾದ ಅವರು ಒಂದಾದ ನಂತರ ಒಂದು ಹಿಟ್ ಚಿತ್ರಗಳನ್ನು ರೂಪಿಸುತ್ತಾ ಹೋದರು. ದಕ್ಷಿಣ ಭಾರತದ ಜನಪ್ರಿಯ ನಿರ್ದೇಶಕರೊಬ್ಬರಾಗಿ ಗುರ್ತಿಸಿಕೊಂಡಿರುವ ಅವರು, ಕನ್ನಡಕ್ಕೆ ಆಗ ಬರುತ್ತಾರೆ ಈಗ ಬರುತ್ತಾರೆ ಎನ್ನುವ ವದಂತಿ ಕಳೆದ ಎರಡು ಮೂರು ವರ್ಷಗಳಿಂದ ಚಾಲ್ತಿಯಲ್ಲಿತ್ತು. ಅದೀಗ 'ರೋಗ್' ಮೂಲಕ ನಿಜವಾಗಿದೆ.

ಇಶಾನ್ 'ರೋಗ್' ಚಿತ್ರದ ನಾಯಕನಟ. ಆಕರ್ಷಕ ರೂಪದ ಇಶಾನ್ ನಿರ್ಮಾಪಕ ಸಿ.ಆರ್. ಮನೋಹರ್ ಅವರ ಸೋದರ. ತಮ್ಮನನ್ನು ನಾಯಕನನ್ನಾಗಿ ರೂಪಿಸುವ ಪ್ರಯತ್ನದಲ್ಲಿ ಅಣ್ಣನಿಗೆ ಹೊಳೆದ ಹೆಸರು ಪೂರಿ ಅವರದು. ಮನೋಹರ್ ಆಹ್ವಾನವನ್ನು ಪೂರಿ ಸುಮ್ಮನೆ ಒಪ್ಪಿಕೊಂಡಿಲ್ಲ. ಇಶಾನ್‌ರನ್ನು ನೋಡಿದ ಮೇಲೆಯೇ ಅವರು ಹೂಂ ಎಂದಿರುವುದು. ಇಶಾನ್ ಮೊದಲ ನೋಟಕ್ಕೇ ಅವರಿಗೆ ಇಷ್ಟವಾದನಂತೆ. 'ಚಿತ್ರರಂಗದಲ್ಲಿ ಈ ಹುಡುಗ ತನ್ನದೇ ಆದ ನೆಲೆ ಕಂಡುಕೊಳ್ಳುತ್ತಾನೆ' ಎನ್ನುವ ವಿಶ್ವಾಸ ಅವರದು.

ಪೂರಿ ಅವರ ಸಿನಿಮಾ ಕನ್ನಡದ ಜೊತೆಗೆ ತೆಲುಗಿನಲ್ಲೂ ಸಿದ್ಧವಾಗಿದೆ. ಚೊಚ್ಚಲ ಚಿತ್ರದಲ್ಲೇ ಎರಡು ಭಾಷೆಗಳಲ್ಲಿ ಪರಿಚಯಗೊಳ್ಳುವ ಸಂಭ್ರಮ ಇಶಾನ್ ಅವರದು. 'ನಾನು ಅದೃಷ್ಟವಂತ. ಯುವನಟನೊಬ್ಬನಿಗೆ ಇದಕ್ಕಿಂತಲೂ ಉತ್ತಮ ಆರಂಭ ದೊರಕುವುದು ಕಷ್ಟ' ಎನ್ನುವ ಅನಿಸಿಕೆ ಅವರದು.

'ರೋಗ್' ಪೂರಿ ಅವರ ಎಲ್ಲ ವರಸೆಗಳನ್ನೂ ಒಳಗೊಂಡಿರುವ ಸಿನಿಮಾ. ಒರಟು ಒರಟಾಗಿ ನಾಯಕನನ್ನು ಚಿತ್ರಿಸುತ್ತಲೇ, ಅವನಿಗೊಂದು ಜನಪ್ರಿಯ ವ್ಯಕ್ತಿತ್ವ ಕಲ್ಪಿಸಿಕೊಡುವುದು ಪೂರಿ ಅವರ ಶೈಲಿ. ಇಶಾನ್ ಕೂಡ ಇಂಥ ಒರಟು–ಸಾಹಸಿಗನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನೃತ್ಯ ಹಾಗೂ ಸಾಹಸದ ದೃಶ್ಯಗಳಿಗೆ ಸಿನಿಮಾದಲ್ಲಿ ಒತ್ತು ನೀಡಲಾಗಿದೆ. ಇದರ ಜೊತೆಗೆ ಇಬ್ಬರು ನಾಯಕಿಯರನ್ನು ಒಳಗೊಳ್ಳುವ ಮೂಲಕ ಗ್ಲ್ಯಾಮರ್ ದೃಷ್ಟಿಯಿಂದಲೂ 'ರೋಗ್' ಸುದ್ದಿ ಮಾಡುತ್ತಿದೆ. ಮನ್ನಾರ ಚೋಪ್ರ ಹಾಗೂ ಏಂಜಿಲಾ ಕ್ರಿಸ್ಲಿಂಕ್ ಎನ್ನುವ ಆಮದು ಚೆಲುವೆಯರೊಂದಿಗೆ ಇಶಾನ್ ಚಿತ್ರದಲ್ಲಿ ಡುಯೆಟ್ ಹಾಡಿದ್ದಾರೆ. ಅವಿನಾಶ್ ಹಾಗೂ ಸಾಧು ಕೋಕಿಲ ತಾರಾಗಣದಲ್ಲಿರುವ ಪ್ರಮುಖರು.

ಮುಖೇಶ್ ಛಾಯಾಗ್ರಹಣ, ಸುನೀಲ್ ಕಶ್ಯಪ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ಸುನೀಲ್ ಅವರು ಕರ್ನಾಟಕ ಮೂಲದವರಂತೆ. ಈಗಾಗಲೇ ಪೂರಿ ಅವರ ತೆಲುಗು ಚಿತ್ರಗಳಿಗೆ ಕೆಲಸ ಮಾಡಿರುವ ಅವರು 'ರೋಗ್' ಮೂಲಕ ಕನ್ನಡಕ್ಕೆ ಬಂದಿದ್ದಾರೆ. ಮಾರ್ಚ್ ತಿಂಗಳ ಕೊನೆಯಲ್ಲಿ ಅಥವಾ ಏಪ್ರಿಲ್ ಮೊದಲ ಭಾಗದಲ್ಲಿ ಪೂರಿ ಸಿನಿಮಾ ತೆರೆ ಕಾಣಲಿದೆ.

■ ರಘು